**ಸ್ವಚ್ಛ ನೋಟು ನೀತಿ–ನೋಟಿನ ಕಟ್ಟುಗಳಿಗೆ ಕಾಗದದ ಪಟ್ಟಿ ಹಾಕುವುದು,ಅಂಟುಪಟ್ಟಿಗಳ ಬಳಕೆ, ಇತ್ಯಾದಿ**

ಡಿಸಿಎಂ (ಎನ್‌ಪಿಡಿ) ಸಂಖ್ಯೆ.317/09.39.00/2003–04 ಅಕ್ಟೋಬರ್ 11, 2003

ಅಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು,

ಎಲ್ಲ ಸಾರ್ವಜನಿಕ ಖಾಸಗಿ ವಲಯ ಬ್ಯಾಂಕುಗಳು/ವಿದೇಶಿ ಬ್ಯಾಂಕುಗಳು/
ಸಹಕಾರಿ ಬ್ಯಾಂಕುಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು.

ಮಾನ್ಯರೇ,

**ಸ್ವಚ್ಛ ನೋಟು ನೀತಿ–ನೋಟಿನ ಕಟ್ಟುಗಳಿಗೆ ಕಾಗದದ ಪಟ್ಟಿ ಹಾಕುವುದು, ಅಂಟುಪಟ್ಟಿಗಳ ಬಳಕೆ, ಇತ್ಯಾದಿ**

ದಿನಾಂಕ ಸೆಪ್ಟೆಂಬರ್ 13, 2002ರ ನಮ್ಮ ಸುತ್ತೋಲೆ ಡಿಸಿಎಂ (ಪಿಎಲ್‌ಜಿ) ಸಂಖ್ಯೆ. 474/10.36.00/2002–03ನ್ನು ದಯವಿಟ್ಟು ನೋಡಿ. ಅದರಲ್ಲಿ ನೋಟಿನ ಕಟ್ಟುಗಳನ್ನು ಭದ್ರಪಡಿಸಲು ಕಾಗದದ/ಪಾಲಿಮರ್‌ನ ಪಟ್ಟಿಗಳನ್ನು ಬಳಸುವಂತೆ ಬ್ಯಾಂಕುಗಳಿಗೆ ಸೂಚಿಸಲಾಗಿದೆ.

2. ಆರ್‌ಬಿಐ ಕಚೇರಿಗಳಿಗೆ ರವಾನೆ ಮಾಡಿದ ಕೊಳೆಯಾದ ನೋಟುಗಳಿಗೆ ಹೊಲಿಗೆ ತಂತಿ ಹಾಕುವುದನ್ನು ಕೈಬಿಡುವ ಮೂಲಕ ಸ್ವಚ್ಛ ನೋಟು ನೀತಿಯನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಬ್ಯಾಂಕುಗಳು ಮಾಡಿರುವ ಪ್ರಯತ್ನಗಳನ್ನು ನಾವು ಶ್ಲಾಘಿಸುತ್ತಾ ಕೆಲವು ಬ್ಯಾಂಕುಗಳು ಅಂಟಿಕೊಳ್ಳುವ ಪಟ್ಟಿಗಳಿಂದ/ಗೋಂದುಹಾಕಿದ ಕಾಗದಗಳಿಂದ ನೋಟಿನ ಕಟ್ಟುಗಳನ್ನು ಭದ್ರಪಡಿಸುತಿದ್ದು ಇದರಿಂದ ಕಟ್ಟಿನ ಮೇಲ್ಭಾಗ ಮತ್ತು/ ಅಥವಾ ಕೆಳಭಾಗಗಳ ಮೇಲೆ ಅವು ಅಂಟಿಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಅಂತಹ ನೋಟಿನ ಕಟ್ಟುಗಳನ್ನು ತೆರೆಯುವಾಗ, ಆರ್‌ಬಿಐ ಕಚೇರಿಗಳಿಗೆ, ಬ್ಯಾಂಕುಗಳಿಗೆ ಮತ್ತು ಬ್ಯಾಂಕ್‌ನ ಗ್ರಾಹಕರಿಗೆ ನೋಟಿನ ಕಟ್ಟುಗಳಿಂದ ಕಾಗದಗಳನ್ನು/ಗೋಂದು ಹಾಕಿದ ಕಾಗದಗಳನ್ನು ತೆಗೆಯಲು ಕಷ್ಟವಾಗುತ್ತಿದೆ ಮತ್ತು ಈ ಪ್ರಕ್ರಿಯೆಯಲ್ಲಿ ಕೆಲವು ನೋಟುಗಳು ಹಾನಿಗೊಳಗಾಗುತ್ತಿವೆ. ಅಲ್ಲದೆ, ಕಟ್ಟುಗಳ ಮೇಲ್ಭಾಗ ಮತ್ತು ಕೆಳಬಾಗದ ನೋಟುಗಳಿಗೆ ಅಂಟಿಕೊಂಡಿರುವ ಅಂಟುಪಟ್ಟಿ/ಗೋಂದು ಹಾಕಿದ ಕಾಗದಗಳಿರುವ ನೋಟಿನ ಕಟ್ಟುಗಳು ಕರೆನ್ಸಿ ಪರಿಶೀಲನೆ ಮತ್ತು ಸಂಸ್ಕರಣಾ ವ್ಯವಸ್ಥೆಯಲ್ಲಿ (ಸಿ.ವಿ.ಪಿ.ಎಸ್.)ನೋಟುಗಳನ್ನು ಸಂಸ್ಕರಿಸಲು ತೊಂದರೆಯುಂಟು ಮಾಡುತ್ತಿವೆ. ಆದ್ದರಿಂದ, ನಾವು, ಅಂಟುಪಟ್ಟಿ/ಗೋಂದು ಹಾಕಿದ ಕಾಗದಗಳನ್ನು ಬಳಸದಂತೆ ಮತ್ತು ಕಾಗದ/ಪಾಲಿಮರ್/ದಾರದಿಂದ ಮಾತ್ರ ನೋಟಿನ ಕಟ್ಟುಗಳನ್ನು ಭದ್ರಪಡಿಸುವಂತೆ ಕರೆನ್ಸಿ ಭಂಡಾರವಿರುವ ಶಾಖೆಗಳು ಸೇರಿದಂತೆ ನಿಮ್ಮ ಎಲ್ಲ ಶಾಖೆಗಳಿಗೆ ಸೂಚಿಸುವಂತೆ ನಿಮ್ಮನ್ನು ಕೋರುತ್ತಿದ್ದೇವೆ. ನೋಟಿನ ಕಟ್ಟುಗಳನ್ನು ಅಂಟಿಕೊಳ್ಳುವ ಅಂಟುಪಟ್ಟಿ/ಗೋಂದು ಹಾಕಿದ ಕಾಗದಗಳಿಂದ ಭದ್ರಪಡಿಸಿರುವುದು ಕಂಡುಬಂದರೆ ಅವುಗಳ ಹಣವನ್ನು ಬ್ಯಾಂಕ್‌ನ ಖಾತೆಗೆ ಖರ್ಚು ಹಾಕುವ ಮೂಲಕ ಬ್ಯಾಂಕಿನ ಸ್ಥಳೀಯ ಭಂಡಾರಕ್ಕೆ ಆ ಕಟ್ಟುಗಳನ್ನು ಹಿಂದಿರುಗಿಸತಕ್ಕದ್ದು.

3. ಕೆಲವು ಹಣದ ಭಂಡಾರಗಳು ಆರ್‌ಬಿಐ ನೀಡಿಕೆ ಕಚೇರಿಗಳಿಗೆ ಕಳುಹಿಸಿದ ಕೊಳೆಯಾದ ನೋಟುಗಳ ರವಾನೆಗಳಲ್ಲಿ ಹೊಲಿಗೆ ತಂತಿ ಹಾಕಿರುವ ನೋಟಿನ ಕಟ್ಟುಗಳನ್ನು ಗುಪ್ತವಾಗಿ ಬೆರೆಸಿರುವುದನ್ನು ಸಹ ಗಮನಿಸಲಾಗಿದೆ. ಇದನ್ನು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ 35ಎ ನೇ ಪ್ರಕರಣದ ಅಡಿಯಲ್ಲಿ ಆರ್‌ಬಿಐ ಹೊರಡಿಸಿರುವ ನವೆಂಬರ್ 7, 2001 ನೇ ದಿನಾಂಕದ ಮಾರ್ಗದರ್ಶಕ ಸೂಚನೆಯ ಉಲ್ಲಂಘನೆ ಎಂದು ಪರಿಗಣಿಸಲಾಗಿದೆ ಮತ್ತು ಅಂತಹ ಉಲ್ಲಂಘನೆಗಳ ಸಂಬಂಧದಲ್ಲಿ ನಗದು ದಂಡ ವಿಧಿಸಲು ನಿರ್ಧರಿಸಲಾಗಿದೆ. ಆದ ಕಾರಣ ನೀವು, ಕೊಳೆಯಾದ ನೋಟುಗಳನ್ನು ಹೊಲಿಗೆ ತಂತಿ ಹಾಕಿರದ ಸ್ಥಿತಿಯಲ್ಲಿ ಮಾತ್ರವೇ ಆರ್‌ಬಿಐಗೆ /ಇತರ ಕರೆನ್ಸಿ ಭಂಡಾರಗಳಿಗೆ ರವಾನಿಸುವಂತೆ ನಿಮ್ಮ ಕರೆನ್ಸಿ ಭಂಡಾರವಿರುವ ಶಾಖೆಗಳಿಗೆ ದಯವಿಟ್ಟು ಮತ್ತೊಮ್ಮೆ ಎಚ್ಚರಿಕೆ ನೀಡುವುದು.

ಈ ಪತ್ರ ತಲುಪಿದ್ದಕ್ಕೆ ದಯವಿಟ್ಟು ತಿಳಿಸಿ

ತಮ್ಮ ವಿಶ್ವಾಸಿ,
(ವಿ.ಆರ್. ಗಾಯಕ್‌ವಾಡ್)
ಮುಖ್ಯ ಪ್ರಧಾನ ವ್ಯವಸ್ಥಾಪಕರು.